ಗಂಡ ಇಡೀ ರಾತ್ರಿ ಮನೆಯಿಂದ ನಾಪತ್ತೆಯಾಗಿದ್ದು ಮುಂಜಾನೆ ಮನೆಗೆ ಬಂದಾಗ ಪತ್ನಿ ಸಿಟ್ಟಿನಿಂದ ಕೇಳಿದಳು. 'ಈಗ ಬೆಳಗಿನ ಏಳು ಗಂಟೆ. ರಾತ್ರಿ ಮನೆಗೆ ಬಾರದಿದ್ದವರು ಈಗೇಕೆ ಬಂದಿರುವಿರಿ?'

'ಟಿಫಿನ್ ಮಾಡಲು' ಗಂಡ ಅಷ್ಟೇ ಕೂಲಾಗಿ ಉತ್ತರಿಸಿದ.

★★★

ಭಿಕ್ಷುಕ: ನಿಮ್ಮ ನೆರಮನೆಯವರು ಹೊಟ್ಟೆ ತುಂಬ ಊಟ ಹಾಕಿದ್ದಾರೆ. ನೀವು ಏನಾದರೂ ತಿನ್ನಲು ಕೊಡಿ.

ಚಿಂಟು: ತಗೋ ಈ ಹಾಜಾಮೋಲಾ ಗುಳಿಗೆಗಳನ್ನು.

★★★

ಅಕ್ಬರ್ ಏನಾಗಿದ್ದ? ಎಂದು ಶಿಕ್ಷಕರು ಗುಂಡನನ್ನು ಪ್ರಶ್ನಿಸಿದರು

'ಅಕ್ಬರ್ ಒಬ್ಬ ಗೇ ಆಗಿದ್ದ' ಎಂದ ಗುಂಡ.

'ಇತಿಹಾಸದಲ್ಲಿ ಇದರ ಉಲ್ಲೇಖ ಎಲ್ಲಿಯೂ ಇಲ್ಲವಲ್ಲ. ಅಕ್ಬರ್ ಗೇ ಆಗಿದ್ದ ಎಂದು ನೀನು ಯಾವ ಆಧಾರದ ಮೇಲೆ ಹೇಳುವೆ?' ಶಿಕ್ಷಕರು ಪ್ರಶ್ನಿಸಿದರು.

'ಲೈಲಾ–ಮಜ್ನು, ಸಿರಿ–ಫರಾವ್, ಹೀರ್–ರಾಂಜಾ, ಸೋನಿ–ಮಹಿಪಾಲ್, ರೋಮಿಯೋ–ಜ್ಯೂಲಿಯೆಟ್ ಎಂದು ನಾವೆಲ್ಲ ಕೇಳಿದ್ದೇವೆ. ಆದರೆ ಆಕ್ಬರ್‌ನ ಹೆಸರಿನೊಂದಿಗೆ ಬೀರಬಲ್ಲ ಎಂದು ಏಕೆ ಬರುತ್ತದೆ?' ಗುಂಡ ಶಿಕ್ಷಕರನ್ನೇ ಪ್ರಶ್ನಿಸಿದ.

**(ಸಂಗ್ರಹ) ಮುರಲೀಧರ ಕುಲಕರ್ಣಿ, ಬೀದರ್**



ಮೇಷ್ಟ್ರು: ಯಾಕೋ ಗುಂಡ ಶಾಲೆಗೆ ಲೇಟಾಗಿ ಬರ್ತಿದೀಯೊ?
ಗುಂಡ: ನಮ್ಮ ಅಪ್ಪ–ಅಮ್ಮ ಜಗಳ ಮಾಡುತಿದ್ರು ಸಾರ್.
ಮೇಷ್ಟ್ರು: ಜಗಳಕ್ಕೂ– ನೀನು ಲೇಟಾಗಿ ಬರೋದಕ್ಕೂ ಏನೋ ಕಾರಣ?
ಗುಂಡ: ನನ್ನ ಚಪ್ಪಲಿ ಅವ್ರ ಕೈಯಲ್ಲಿದ್ವು ಸಾರ್.

★★★

ಬಸ್ಯಾ: ಹೆಂಡತಿಗೆ ಲೇ ಎಲ್ಲೆದಿ.
ಹೆಂಡತಿ: ಯಾಕ ಕೂಗಾಕತ್ತೀರಿ? ಏನಾತ್?
ಬಸ್ಯಾ: ನಮ್ ಮನಿ ಮುಂದ ಇಷ್ಟು ಜನ ಯಾಕ ಕೂಡ್ಯಾರ?
ಹೆಂಡತಿ: ಅಳಿಯ ಬರಾಕ್ಹತ್ಯಾನ ಅಂತ ಓಣ್ಯಾನ ಮಂದಿಗೆ ಹೇಳಿನಿ ಅದಕ್ಕ.
ಬಸ್ಯಾ: ಅಲ್ಲ ನಮ್ಮ ಅಳಿಯಾ ಬರ್ತಾನ ಅಂದ್ರ ಇಷ್ಟ ಮಂದಿ ಯಾಕ ಕೂಡ್ಬೇಕು?
ಹೆಂಡತಿ: ನಾನು ಇಂಗ್ಲಿಷ್ ಕ್ಲಾಸಿಗೆ ಹೊಂಟೆನಲ್ಲ.
ಬಸ್ಯಾ: ಅದಕ್ಕ?
ಹೆಂಡತಿ: 'ಅದಕ್ಕ ನಾನು ಎಲ್ರಿಗೂ ಇಂಗ್ಲಿಷನ್ಯಾಗ ಹೇಳಿದ್ದೆ.
ಬಸ್ಯಾ: ಏನಂತ?
ಹೆಂಡತಿ: ಸನ್ನಿಲಿಯಾನ್ ಬರ್ತಾರ ಅಂತ.
ಬಸ್ಯಾ: ಏಯ್ ಅದು ಸನ್ನಿಲಿಯಾನ್ ಅಲ್ಲಲೇ, ಸನ್ ಇನ್ ಲಾ ಅಂತ!

★★★

ಮೊದಲಿನಿಂದಲೂ ಇಂಗ್ಲಿಷ್ ಕಲಿತಿರಬಹುದು.
ದೊಡ್ಡ ದೊಡ್ಡ ಇಂಗ್ಲಿಷ್ ಶಾಲೆಯಲ್ಲಿ ಕಲಿತಿರಬಹುದು.
ದಿನಾಲೂ ಇಂಗ್ಲಿಷಿನಲ್ಲಿ ಮಾತನಾಡುತ್ತಿರಬಹುದು.
ದಿನಾಲೂ ಇಂಗ್ಲಿಷಿನಲ್ಲೇ ಬರೆಯುತ್ತಿರಬಹುದು.
ಆದರೆ ಓಟು ಹಾಕಬೇಕು ಅಂದರೆ ಕನ್ನಡ ಶಾಲೆಗೇ ಬರಬೇಕು!

**(ಸಂಗ್ರಹ) ಕುಬೇರಪ್ಪ ಎಂ.ವಿಭೂತಿ, ಹರಿಹರ**

